ಈ ಮಧ್ಯೆ ಅವಶ್ಯವಿರುವ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವಂತೆ ಗುತ್ತಿಗೆದಾರರ ಪ್ರತಿನಿಧಿ ಸಮಕ್ಷಮ ಕ್ರಮ ಜರುಗಿಸಿದ ಪರಿಣಾಮವಾಗಿ ನವಲಗುಂದ ತಾಲ್ಲೂಕಿನ ಅರೆಕುರಹಟ್ಟಿ, ಬೆಲಕವಾಡ, ಹಾಗೂ ಕಾಲವಾಡ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಪುನ: ಪ್ರಾರಂಭಿಸಲಾಗಿದೆ.

ಬನಹಟ್ಟಿ ಮತ್ತು ಭೈರನಹಳ್ಳಿ ಗ್ರಾಮಸ್ಥರು ತಮ್ಮ ಕೆರೆಯಲ್ಲಿ ನೀರಿನ ಸಂಗ್ರಹಣ ಕಡಿಮೆ ಇರುವುದರಿಂದ ಶುದ್ಧೀಕರಣ ಘಟಕಕ್ಕೆ ನೀರು ಬಿಡಲು ಒಪ್ಪುತ್ತಿಲ್ಲ. ಆದಾಗ್ಯೂ ನೀರಿನ ಅತೀ ಸಮಸ್ಯೆಯಿರುವ ಸುರಕೋಡ ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವದಕ್ಕೋಸ್ಕರ ಏರು ಕೊಳವೆ ರಿಪೇರಿ ಕಾರ್ಯ ಕೈಕೊಳ್ಳಲಾಗಿದೆ.

ಬನಹಟ್ಟಿ ಹಾಗೂ ಭೈರನಹಟ್ಟಿ ಗ್ರಾಮಸ್ಥರಿಗೆ ಮನ ಒಲಿಸಿ ಅಲ್ಲಿಯ ಶುದ್ಧೀಕರಣ ಘಟಕಕ್ಕೆ ನೀರು ಬಿಡುವುದರೊಂದಿಗೆ ಎಲ್ಲಾ ಗ್ರಾಮಗಳಿಗೆ ನೀರು ಒದಗಿಸುವ ಕಾರ್ಯ ಪ್ರಾರಂಭಿಸಲು ಪ್ರಯತ್ನಿಸಲಾಗುತ್ತಿದೆ.

ರಾಜ್ಯದಲ್ಲಿ ಗ್ರಾಮಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ

2636 (3344) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧. ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಪ್ರಸ್ತಾವನೆ ಸರಕಾರದ ಮಟ್ಟದಲ್ಲಿದೆಯೇ;

೨. ಪಂಚಾಯಿತಿ ಮಟ್ಟದಲ್ಲಿ ಇರುವ ಅಧಿಕಾರಗಳ ಮೇಲೆ ನಿಯಂತ್ರಣದ ಅಧಿಕಾರ ಪಂಚಾಯತಿಗಳಿಗೆ ನೀಡಲಾಗುವುದೆ?

೩. ಗ್ರಾಮೀಣ ಮಟ್ಟದಲ್ಲಿ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ಇಲಾಖೆಗೆ ನೀಡುವ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾಗಿದೆಯೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

೧. ಹೌದು ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವ ಸಲುವಾಗಿ ಅಧ್ಯಯನ ಮಾಡಲು ವರ್ಕಿಂಗ್ ಗ್ರೂಪ್‌ನ್ನು ರಚಿಸಲಾಗಿದೆ.

೩. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕಾಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳು ಸಂಬಂಧಪಟ್ಟ ಚುನಾಯಿತ ಸಂಸ್ಥೆಗಳ ನಿಯಂತ್ರಣ ಹಾಗೂ ಉಸ್ತುವಾರಿಗೊಳಪಟ್ಟಿರುತ್ತಾರೆ.

೩. ಪ್ರತಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾವಣೆಗೊಂಡ ಇಲಾಖೆಗಳು ಹಾಗೂ ಯೋಜನೆಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಕ್ರಮವಾಗಿ ನೀಡಲಾಗಿದೆ.

ರಾಜ್ಯದಲ್ಲಿ ಫೇಲಾದ ಪಿಯುಸಿ ಎರಡನೇಯ ವರ್ಷದ ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಪರೀಕ್ಷೆ

2637 (3345) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ರಾಜ್ಯದಲ್ಲಿ ಫೇಲಾದ ಪಿಯುಸಿ ಎರಡನೇಯ ವರ್ಷದ ವಿದ್ಯಾರ್ಥಿಗಳು ಜುಲೈ ಒಳಗಡೆ ಪರೀಕ್ಷೆಯನ್ನು ತೆಗೆದುಕೊಳ್ಳುವ ಅವಕಾಶವನ್ನು ನೀಡುವ ಯೋಜನೆ ಸರಕಾರದ ಮಟ್ಟದಲ್ಲಿದೆಯೆ;

2) ಅವರಿಗೆ ಸಿ.ಇ.ಟಿ. ಹಾಗೂ ಇತರೆ ಮುಂದಿನ ಹಂತದ ಆಯ್ಕೆಯಲ್ಲಿ ಅನುವು ಮಾಡಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

3) ಆಂಧ್ರ ಪ್ರದೇಶದಲ್ಲಿ ಈ ತರಗತಿಗಳಿಗೆ ಬೇಗನೆ ಪರೀಕ್ಷೆಯನ್ನು ತೆಗೆದುಕೊಂಡು ಪಾಸಾದ ಅಭ್ಯರ್ಥಿಗಳು ತಮ್ಮ ಒಂದು ವರ್ಷದ ಅವಧಿ ಬಳಸಿಕೊಳ್ಳುವ ಅವಕಾಶ ನೀಡುವುದು ನಿಜವೇ?

4) ಅಂತಹ ಎಷ್ಟು ವಿದ್ಯಾರ್ಥಿಗಳು ರಾಜ್ಯದ ವಿವಿಧ ವಿದ್ಯಾ ಸಂಸ್ಥೆಗಳಲ್ಲಿ ಸೇರಿದ್ದಾರೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಇಲ್ಲ

ಆ) ಇಲ್ಲ

ಇ) ಹೌದು

ಈ) ಈ ಮಾಹಿತಿ ತಕ್ಷಣವೇ ಲಭ್ಯವಿರುವುದಿಲ್ಲ.